ಶ್ರೀ ಹೆಚ್.ಕೆ.ಪಾಟೀಲ್: ಆ ವರದಿಯ ವಿವರ ನನ್ನ ಹತ್ತಿರ ಇಲ್ಲ. ಆ ವರದಿಯ ನಕಲನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಇವತ್ತು ಉಳಿದಿರುವ ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ.ವಿ.ಪಾಪಣ್ಣ: ಹೊಗೆಸೊಪ್ಪಿನ ವಿಚಾರದ ಬಗ್ಗೆ ನಿಲುವಳಿ ಸೂಚನೆ ಕೊಟ್ಟು ಒಂದು ವಾರದಿಂದ ಕಾಯ್ದಿದ್ದೇನೆ. ಹೊಗೆಸೊಪ್ಪು ಬೆಳೆಯುವ ರೈತರಿಗೆ ಬಹಳ ತೊಂದರೆಯಾಗಿದೆ. ಗಮನ ಸೆಳೆಯುವ ಸೂಚನೆ ಮೂಲಕ ಕೂಡ ಪ್ರಸ್ತಾಪಿಸಲು ಅವಕಾಶ ಕೊಡಲಿಲ್ಲ. ದಯಮಾಡಿ ಐದು ನಿಮಿಷವಾದರೂ ಪ್ರಸ್ತಾಪ ಮಾಡಲು ಅವಕಾಶ ಕೊಡಿಸ್ವಾಮಿ. ಇದೇ ವಿಷಯದಲ್ಲಿ ನನ್ನ ನಾಲ್ಕನೇ ಪ್ರಶ್ನೆ ಇತ್ತು. ಈ ವಿಷಯವನ್ನು ಕಳೆದ ಒಂದು ವಾರದಿಂದ ಮುಂದಕ್ಕೆ ಹಾಕುವುದೆ ಆಗಿದೆ.

ಅಧ್ಯಕ್ಷರು: ಸ್ವಾಮಿ, ಅದಕ್ಕಿಂತ ಮುಖ್ಯವಾದದ್ದು ಕಾಲಿಂಗ್ ಅಟೆನ್‌ಶನ್ ಇದೆ. ನಿಲುವಳಿ ಸೂಚನೆ ಇದೆ, ಇದು ಮುಖ್ಯವಾದ ಸಬ್ಜೆಕ್ಟ್, ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲವೆಂದು ನಾನು ಹೇಳುತ್ತಿದ್ದೇನಲ್ಲಾ. ಲ್ಯಾಪ್ಸ್ ಆಗುವುದಿಲ್ಲ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ವಿ.ಪಾಪಣ್ಣ: ಅಧ್ಯಕ್ಷರೆ, ಹೊಗೆಸೊಪ್ಪು ಬೆಳೆಗಾರರ ವಿಚಾರ ಇದೆ. ದಯವಿಟ್ಟು ಈಗ ಅವಕಾಶ ಕೊಡಿ.

ಅಧ್ಯಕ್ಷರು: ನಿಮ್ಮ ಪ್ರಶ್ನೆ ಲ್ಯಾಪ್ಸ ಆಗುವುದಿಲ್ಲ. ನೆಕ್ಸ್ಟ್ ವೀಕ್ ತೆಗೆದುಕೊಳ್ಳುತ್ತೇನೆ. ಸ್ವಾಮಿ, ಪ್ರಶ್ನೋತ್ತರ ವೇಳೆ ಮುಗಿಯಿತು. ಆದಕಾರಣ ಮುಂದಿನ ವಾರ ತೆಗೆದುಕೊಳ್ಳುತ್ತೇವೆ. ನಿಮ್ಮ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ. ಮೊದಲಿಂದ ಅದೇ ರೀತಿ ನಡೆದು ಕೊಂಡು ಬರುತ್ತಿದ್ದೇವೆ. ಸ್ವಾಮಿ ಲ್ಯಾಪ್ಸ್ ಆಗುವುದಿಲ್ಲ, I can't allow that.

ಶ್ರೀ ವಿ.ಪಾಪಣ್ಣ: ಇನ್ನು ಸ್ವಲ್ಪ, ಹೊತ್ತು ಸಮಯಾವಕಾಶ ಕೊಡಿ. ನಮ್ಮ ಪ್ರಶ್ನೆ ಅಕ್ಸ್‌ಪ್ಟ್ ಮಾಡಿ.

ಅಧ್ಯಕ್ಷರು: ಆ ರೀತಿಯಲ್ಲಿ ಅಲೋ ಮಾಡುವುದಕ್ಕೆ ನನಗಾಗುವುದಿಲ್ಲ. ಇವೊತ್ತು ಆ ರೀತಿ ಮಾಡಿದರೆ ನಾಳೆಯೂ ಹಾಗೆಯೇ ಮಾಡಬೇಕಾಗುತ್ತದೆ. ದಯವಿಟ್ಟು ತಾವು ಯೋಚನೆ ಮಾಡಿ ನೋಡಿ. 11-10ಕ್ಕೆ ಪ್ರಶ್ನೋತರ ಶುರುವಾಯಿತು, ಈಗ 12-10ಕ್ಕೆ ನಾನು ಕ್ಲೋಸ್ ಮಾಡುತ್ತಿದ್ದೇನೆ. ಆದರೆ ನಿಮ್ಮ ಪ್ರಶ್ನೆ ಎಲ್ಲೂ ಹೋಗುವುದಿಲ್ಲ. ಲ್ಲಾಪ್ಸ್ ಆಗುವುದಿಲ್ಲ. ಪ್ರಶ್ನೋತರ ಅವಧಿ ಮುಗಿಯಿತು. ಪ್ರಶ್ನೋತರ ಮುಗಿಯಿತು. ಈಗ ಚುಕ್ಕೆ ರಹಿತ ಪ್ರಶ್ನೆಗೆ ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಮಂಡಿಸಬೇಕು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:26-07-2002ರ ಲಿಖಿತ ಮೂಲಕ ಉತ್ತರಿಸುವ 81 ಪ್ರಶ್ನೆಗಳ ಪೈಕಿ 68 ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಅನುಬಂಧ - I

IV ಕಾರ್ಯದರ್ಶಿಯವರ ವರದಿ

ಶ್ರೀ ಟಿ.ರಾಜಣ್ಣ ಕಾರ್ಯದರ್ಶಿ (ವಿಧಾನಸಭೆ): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ನೀರಾವರಿ ಮತ್ತು ಇತರ ಕೆಲವು

ಕಾನೂನು ಎರಡನೇ (ತಿದ್ದುಪಡಿ) ವಿಧೇಯಕ 2002 ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಅನುಬಂಧ - II

(ಈ ಹಂತದಲ್ಲಿ ಮಾನ್ಯ ಹೆಚ್.ಸಿ. ಬಸವರಾಜ್, ಪಾಪಣ್ಣ, ಎ.ಮಂಜು, ಗುಂಡಪ್ಪ ವಕೀಲ್ ಹಾಗೂ ಸಿ.ಗುರುಸ್ವಾಮಿಯವರು ಒಟ್ಟಿಗೆ ಮಾತನಾಡುತ್ತಾ ಪ್ರಶ್ನೆಯನ್ನು ಕೇಳಲು ಅವಕಾಶ ಕೊಡಬೇಕೆಂದು ಕೇಳುತ್ತಿದ್ದರು)

ಅಧ್ಯಕ್ಷರು: ನೋಡಿ, ನಾನು ಈಗಾಗಲೇ ಪ್ರಶ್ನೋತ್ತರ ಅವಧಿ ಮುಗಿಯಿತು ಎಂದು ಹೇಳಿದ್ದೇನೆ. ನಾನು ಹೊಸದಾಗಿ ಈ ನಿಯಮವನ್ನು ಪಾಲನೆ ಮಾಡಿಕೊಂಡು ಬರುತ್ತಿದ್ದೇನೆ. ಆ ನಿಯಮವನ್ನು ಬಿಟ್ಟು ಇವೊತ್ತು ಪ್ರಶ್ನೆ ಕೇಳಲು ನಾನು ಈಗ ಅಲೋ ಮಾಡಿದರೆ ನಾಳೆಯೂ ಮಾಡಬೇಕಾಗುತ್ತದೆ. ನಾಳೆಯಷ್ಟೇ ಅಲ್ಲ ಆಚೆನಾಡಿದ್ದು ಕೂಡ ಮಾಡಬೇಕಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ: ಅಧ್ಯಕ್ಷರೆ, ಇವೊತ್ತು ಬೆಳಿಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ದಯವಿಟ್ಟು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು ಲೀ ಆಗಬೇಕು. ಇವೆಲ್ಲಾ ಆದ ಮೇಲೆ ಶೂನ್ಯ ವೇಳೆ ತೆಗೆದುಕೊಳ್ಳೋಣ. ಇನ್ನು ಮೂರು ನಿಮಿಷ ತಡೆಯಿರಿ. These are all formalities. You must understand this.

ಶ್ರೀ ವಿ.ಪಾಪಣ್ಣ: ಅಧ್ಯಕ್ಷರೆ, ಹೊಗೆಸೊಪ್ಪು ಬೆಳೆ ವಿಚಾರ ಚರ್ಚೆಗೆ ತೆಗೆದುಕೊಳ್ಳಬೇಕು. ಶೂನ್ಯವೇಳೆಯಲ್ಲಿ ನಾವು ಪ್ರಸ್ತಾಪ ಮಾಡುವವರಿದ್ದೇವೆ.

ಅಧ್ಯಕ್ಷರು: ಇನ್ನೂ ವೇಳೆಗೆ ನಾವು ಬಂದೇ ಇಲ್ಲ. ಇದಾದ ಮೇಲೆ ತೆಗೆದುಕೊಳ್ಳುತ್ತೇವೆ. ಕಂದಾಯ ಸಚಿವರೇ, ತಾವು ವಿಧೇಯಕ ಮಂಡನೆ ಮಾಡಿ.

ಶ್ರೀ ಹೆಚ್.ಸಿ. ಬಸವರಾಜ್: ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಯನ್ನು ಒಂದು ವಾರದ ಹಿಂದೆಯೇ ಕೊಟ್ಟಿದ್ದೇನೆ. ಹೊಗೆಸೊಪ್ಪು ಬೆಳೆದು ರೈತರು ಸಾಯುತ್ತಿದ್ದಾರೆ. ಈ ವಿಚಾರದ ಬಗ್ಗೆ ಚರ್ಚೆ ಆಗಬೇಕಾಗಿದೆ.

(ಈ ಹಂತದಲ್ಲಿ ಶ್ರೀ ಹೆಚ್.ಸಿ.ಬಸವರಾಜ್, ಶ್ರೀ ಗುಂಡಪ್ಪ, ವಕೀಲ್, ಶ್ರೀ ವಿ.ಪಾಪಣ್ಣ, ಶ್ರೀ ಸಿ.ಗುರುಸ್ವಾಮಿ ಹಾಗೂ ಶ್ರೀ ಎ.ಮಂಜುರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಅಧ್ಯಕ್ಷರು: ಬಸವರಾಜುರವರೆ, ನಿಲುವಳಿ ಸೂಚನೆಯನ್ನು ಕನ್‌ವರ್ಟ್ ಮಾಡಿ ಕಾಲಿಂಗ್ ಅಟೆನ್‌ಶನ್ ಆಗಿ ಕಳುಹಿಸಿಕೊಟ್ಟಿದ್ದೇವೆ. ಹೊಗೆಸೊಪ್ಪಿನ ವಿಷಯ ಕಾಲಿಂಗ್ ಅಟೆನ್‌ಶನ್ ಆಗಿ ಕನ್‌ವರ್ಟ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈಗ ತಾವೆಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಒಂದ್ನಿಮಿಷದ ಕೆಲಸ ಲೀ ಮಾಡುವುದು. ಇದು ಮುಗಿದ ಮೇಲೆ ಶೂನ್ಯ ವೇಳೆ ತೆಗೆದುಕೊಳ್ಳೋಣ ಎಂದರೂ ಕೇಳುವುದಿಲ್ಲ ಹೇಗೆ? ನಿಮ್ಮಿಷ್ಟ ಬಾವಿಯಲ್ಲಿ ಕುಳಿತುಕೊಳ್ಳಿ.

ಶ್ರೀ ವಿ.ಪಾಪಣ್ಣ: ಶೂನ್ಯ ವೇಳೆಯನ್ನು ಇದಾದ ಮೇಲೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ನೋಡ್ರಿ ಸಭೆ ಒಪ್ಪಿದರೆ ಶೂನ್ಯ ವೇಳೆಯಲ್ಲಿ, ಐ ವಿಲ್ ಇಟ್ ಅಪ್. ಇನ್ನು ನಿಲುವಳಿ ಸೂಚನೆ ಏನಿತ್ತು ಅದನ್ನು ಕಾಲಿಂಗ್ ಅಟೆನ್‌ಶನ್ ಆಗಿ ಕನ್‌ವರ್ಟ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ.

ಶ್ರೀ ವಿ.ಪಾಪಣ್ಣ: ಅಧ್ಯಕ್ಷರೆ, ನನ್ನದು ಇವೊತ್ತು ನಾಲ್ಕನೇ ಪ್ರಶ್ನೆ ಇತ್ತು. ಆದರೆ ನಾನು ಸದನದಲ್ಲಿ ಇದ್ದರೂ ನನಗೆ ಅವಕಾಶ ಕೊಡಲಿಲ್ಲ.

ಅಧ್ಯಕ್ಷರು: ಆ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ. ನೆಕ್ಸ್ಟ್ ವೀಕ್ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಗುರುಸ್ವಾಮಿ: ಇವೊತ್ತು ಪ್ರಶ್ನೋತ್ತರ ಅವಧಿ ಜಾಸ್ತಿ ಮಾಡಿ.

ಅಧ್ಯಕ್ಷರು: ಸಾಧ್ಯವಿಲ್ಲ. ಏಕೆಂದರೆ ಒಂದು ದಿವಸ ಜಾಸ್ತಿ ಮಾಡಿದರೆ ಮಿಕ್ಕಿದ ದಿವಸಗಳಲ್ಲೂ ಜಾಸ್ತಿ ಮಾಡಬೇಕಾಗಿ ಬರುತ್ತದೆ. ದಟ್ ಈಸ್ ಮೈ ಡಿಫಿಕಲ್ಟಿ. ನೋ, ನೋ, ಇಟ್ ವಿಲ್ ಬಿ ಟೇಕನ್ ಅಪ್ ನೆಕ್ಸ್ಟ್ ವೀಕ್.

(ಗೊಂದಲ)

ಅಧ್ಯಕ್ಷರು: ನೋಡಿ, ರೂಲ್ಸ್ ಪ್ರಕಾರ ನಾನು ಕಾನೂನು ಪಾಲನೆ ಮಾಡಬೇಕು. ಪ್ರಶ್ನೋತ್ತರಗಳಿಗೆ ಒಂದು ಗಂಟೆಯ ಕಾಲ ಅಲೋ ಮಾಡಿದ್ದೇನೆ. ಒಂದು ಗಂಟೆಯ ಅವಧಿ ಆದ ಮೇಲೆ ಐ ಕಾಂಟ್ ಅಲೋ.

(ಬಾವಿಯಿಂದ ಶ್ರೀ ಪಾಪಣ್ಣ ಮಾತನಾಡಿದರು)

ಅಧ್ಯಕ್ಷರು: ಸ್ವಾಮಿ, ಮಂತ್ರಿಗಳು ಹೋಗಬೇಕು ಎಂದು ಹೇಳಿದರು, ಅದಕ್ಕೆ ಅವರಿಗೆ ಅವಕಾಶ ಕೊಟ್ಟೆ. ಪಾಪಣ್ಣನವರೆ, ಒಂದು ಕೆಲಸ ಮಾಡೋಣ. ನಿಮ್ಮ ನಾಲ್ಕನೇ ಪ್ರಶ್ನೆಯನ್ನು ಶೂನ್ಯ ವೇಳೆಯಲ್ಲಿ ಎತ್ತಿ. ಆಗ ನಾನು ಅಲೋ ಮಾಡುತ್ತೇನೆ.

(ಧರಣಿ ನಿರತರಾಗಿದ್ದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋದರು)

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲೂ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಹೀಗೆ ಉತ್ತರ ಬರದಿದ್ದರೂ ತಾವು ಮುಂದುವರೆಸಿದರೆ ಉತ್ತರ ಬರದೇ ಇರುವುದಕ್ಕೆ ಜವಾಬ್ದಾರರು ಯಾರು? ಹೋಣೆಗಾರರು ಯಾರು?

ಅಧ್ಯಕ್ಷರು: ಸ್ವಾಮಿ ಕೃಷ್ಣಮೂರ್ತಿಯವರೆ, ಯಾವ ಪ್ರಶ್ನೆಗೆ ಉತ್ತರ ಬಂದಿಲ್ಲ, ಯಾವ ಕಾಲಿಂಗ್ ಅಟೆನ್‌ಶನ್‌ಗೆ ಉತ್ತರ ಬಂದಿಲ್ಲ ಎನ್ನುವ ಬಗ್ಗೆ ತಾವು ನನ್ನ ಛೇಂಬರ್ಸ್‌ಗೆ ಬಂದು ಮಾತನಾಡಿ ಎಂದು ಹೇಳಿದ್ದೇನೆ. Now, I can't help you. ಬನ್ನಿ, ನನ್ನ ಛೇಂಬರ್ಸ್‌ಗೆ ಬನ್ನಿ ಮಾತನಾಡೋಣ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಯಾರೇ ಸದಸ್ಯರಿರಬಹುದು, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಕಳುಹಿಸಿಕೊಟ್ಟಿದ್ದೇನೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಹೆಚ್ಚು ತಿಳಿದುಕೊಳ್ಳಬೇಕಾದರೆ ನೀವು ನನ್ನ ಛೇಂಬರ್ಸ್‌ಗೆ ಬನ್ನಿ, ಅವರಿಗೆ ಫೋನ್ ಮಾಡಿ ತರಸಿಕೊಡೋಣ. ಸಭೆಯಲ್ಲಿ ಬೇಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸಭೆಯಲ್ಲಿ ಮಾತನಾಡುವುದಕ್ಕೆ ನಮಗೆ ಹಕ್ಕಿದೆ. ನಮ್ಮ ಸಮಸ್ಯೆಗಳನ್ನು ನಾವು ಸರ್ಕಾರದ ಮುಂದೆ ಹೇಳಬೇಕಾಗುತ್ತದೆ. ಇವೊತ್ತು ಪಾಪಣ್ಣ ಇರಬಹುದು

ಅಥವಾ ನಾನಿರಬಹುದು. ಕಳೆದ ವಿಧಾನಸಭಾ ಅಧಿವೇಶನದಲ್ಲಿ ಕೇಳಿದ ನನ್ನ ಮೂರು ಪ್ರಶ್ನೆಗಳು ಇವೊತ್ತಿನವರೆಗೂ ಬಂದಿಲ್ಲ. ಇದು ಗಮನ ಸೆಳೆಯುವ ಸೂಚನೆಯಲ್ಲಾಗಲಿ, ಶೂನ್ಯ ವೇಳೆಯಲ್ಲಾಗಲೀ ಬಂದಿಲ್ಲ. ಈ ತರಹ ಸಭೆಯಲ್ಲಿ ಭಾಗವಹಿಸುವುದಾದರೆ ನಾವೇಕೆ ಸಭೆಗೆ ಬರಬೇಕು?

ಅಧ್ಯಕ್ಷರು: ಶ್ರೀಕಂಠಯ್ಯನವರೆ, ನೀವು ಬಿಲ್ ಮೂವ್ ಮಾಡಿ, ಅದು ಒಂದ್ನಿಮಿಷದ ಕೆಲಸ ಅದು.

V ಶಾಸನ ರಚನೆ:

ಎ) ವಿಧೇಯಕದ ಮಂಡನೆ.

ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2002.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಯ ಸಚಿವರು): ಮಾನ್ಯ ಅಧ್ಯಕ್ಷ, "2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು: ಅನುಬಂಧ-III ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರು: ಸಿಂಧ್ಯಾರವರು ಮತ್ತು ವಿರೋಧ ಪಕ್ಷದಲ್ಲಿ ನಾಯಕರು ಗಮನಿಸಬೇಕು. ಈಗ ಕೆಲವು ಸದಸ್ಯರು ಶೂನ್ಯ ವೇಳೆ ಬಹಳ ಜರೂರು ಇದೆಯಾದ ಕಾರಣ ದಯವಿಟ್ಟು ಸಮಯ ಕೊಡಬೇಕೆಂದು ನನ್ನನ್ನು ಕೇಳುತ್ತಿದ್ದಾರೆ. ಏನ್ಮಾಡೋಣ ಹೇಳಿ?

ಶ್ರೀ ಡಿ.ವಿ.ಸದಾನಂದಗೌಡ: ಶೂನ್ಯ ವೇಳೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಹಾಗಾದರೆ ಒಂದೊಂದು ಪಾರ್ಟಿಗೆ ಒಂದೊಂದು ವಿಷಯ ಎತ್ತಲು ಅವಕಾಶ ಕೊಡೋಣ. ಪಾರ್ಟಿಯವರೇ ಯಾರು ಮೊದಲು ಮಾತನಾಡಬೇಕು ಎಂಬುದನ್ನು ತೀರ್ಮಾನ ಮಾಡಿಕೊಳ್ಳಲಿ ಒಟ್ಟಿನಲ್ಲಿ ಒಂದೊಂದು ಪಾರ್ಟಿಯವರು ವಿಷಯ ಪ್ರಸ್ತಾಪ ಮಾಡಲಿ.

ಶ್ರೀ ಹಂಪನಗೌಡ: ಅಧ್ಯಕ್ಷರೆ, ಸಿಂಧನೂರು ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಇದರ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಡಬೇಕೆಂದು ಮನವಿಕೊಟ್ಟಿದ್ದೆ.

ಅಧ್ಯಕ್ಷರು: ಇವೊತ್ತು ಕೊಟ್ಟಿದ್ದೂ ಹೇಗೆ ತೆಗೆದುಕೊಳ್ಳುವುದು? ನಿಮಗಿಂತ ಹಿಂದೆಯೇ ಕೊಟ್ಟಿರುವವರು ಇದ್ದಾರೆ. ಒಂದೊಂದು ಪಾರ್ಟಿಯಲ್ಲಿ ಒಬ್ಬರಿಗೆ ಅಲೋ ಮಾಡುತ್ತೇನೆ, ಯಾರಾದರೂ ಮಾತನಾಡಿ. ಪಾಪಣ್ಣನವರೆ, ತಾವು ಕುಳಿತುಕೊಳ್ಳಿ ತಮಗೂ ಅಲೋ ಮಾಡುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ: ನನ್ನ ವಿನಂತಿ ಏನೆಂದರೆ,